C.C.1159_2015_CHARGE

## ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮದ್ದೂರು

**ಸಿ.ಸಿ. ಸಂಖ್ಯೆ 1159/2015**

ಫಿರ್ಯಾದು ಮದ್ದೂರು ಪೋಲೀಸರು

ವಿರುದ್ಧ

ಆರೋಪಿಃ ಜಿ.ಕೆ.ರಾಜು ಬಿನ್ ಕಂಡಯ್ಯ, 50 ವರ್ಷ,
ವಾಸ ಕೆ.ಹೆಚ್.ನಗರ, 1 ನೇ ವಾರ್ಡ್,
ಪ್ರಿಯ ದರ್ಶಿನಿ ಹೋಟೆಲ್ ಹತ್ತಿರ,
ಮದ್ದೂರು ಟೌನ್.

**ದೋಷಾರೋಪಣೆ**

ಶ್ರೀ ಆದಿತ್ಯ.ಆರ್.ಕಲಾಲ್ ಬಿ.ಎ.ಎಲ್., ಎಲ್‌ಎಲ್.ಎಂ., ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮದ್ದೂರು ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ

ದಿಃ 21-05-2009 ರ ರಾತ್ರಿ 10-30 ಗಂಟೆ ಸಮಯದಲ್ಲಿ ಮದ್ದೂರು ಠಾಣಾ ಸರಹದ್ದಿಗೆ ಸೇರಿದ ಶಿವಪುರ ಗ್ರಾಮದಲ್ಲಿ 1 ನೇ ಆರೋಪಿಯಾದ ನೀವು ಚಾಸಾ-1 ದಿವ್ಯಾರವರ ಬಾಬ್ತು ಕಾರ್ ನಂ.ಕೆಎ-11-ಎಂ-2829 ವಾಹನದ ವಿಮೆ ಪಾಲಿಸಿಯಿಂದ ಅಕ್ರಮವಾಗಿ ಹಣ ಪಡೆದುಕೊಳ್ಳುವ ದುರುದ್ದೇಶದಿಂದ ಶಿವಪುರದಲ್ಲಿ ಮೃತನಾದ ಎನ್.ಎಚ್.ಹರೀಶ್ ಎಂಬುವರಿಗೆ ಅಪಘಾತ ಆಗದೇ ಇದ್ದರೂ, ಸದರಿ ವಾಹನದಿಂದ ಅಪಘಾತ ಆಗಿದೆಯೆಂದು ಚಾಸಾ-1 ರವರ ಬಾಬ್ತು ಕಾರಿನ ನಂಬರ್ ಪಿರ್ಯಾದಿನಲ್ಲಿ ಸೇರಿಸಿ ಸುಳ್ಳು ಪಿರ್ಯಾದನ್ನು ತಯಾರಿಸಿ ಚಾಸಾ-1 ರವರಿಗೆ ಹಾಗೂ ವಿಮಾ ಕಂಪನಿಗೆ ವಂಚಿಸುವ ಉದ್ದೇಶಕ್ಕಾಗಿ ಸುಳ್ಳು ಪಿರ್ಯಾದನ್ನು ಸೃಷ್ಟಿ ಮಾಡಿ ಮೊ.ಸಂ. 226-09 ಕಲಂ 279, 337 ಐಪಿಸಿ ಸಹವಾಚ ಕಲಂ 187 ಐಎಂವಿ ಕಾಯ್ದೆ ರೀತ್ಯಾ ಪ್ರಕರಣ ದಾಖಲು ಮಾಡಿದ್ದು, ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವ ಭಾ.ದಂ.ಸಂ.ಕಲಂ 468 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಾ ಅಂತ ದೋಷಾರೋಪಣೆ ಮಾಡುತ್ತಿದ್ದೇನೆ.

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು, ಚಾಸಾ-1 ರವರ ರೀತಿಯಲ್ಲಿ ನಕಲಿ ಸಹಿ ಮಾಡಿ ಆರೋಪಿ-2 ರವರಿಂದ ಗುರುತಿಸಿ ಸಹಿ ಪಡೆದ ಸುಳ್ಳು ಪವರ್ ಅಫ್ ಅಟಾರ್ನಿಯನ್ನು ಸುಳ್ಳು ಸೃಷ್ಟನೆಯ ದಸ್ತಾವೇಜು ಎಂದು

Aditya 16/4

ತಿಳಿದು, ತಯಾರಿಸಿಕೊಂಡು ಕಾರನ್ನು ತನ್ನ ವಶಕ್ಕೆ ಪಡೆದುಕೊಳ್ಳುವ ಸಲುವಾಗಿ ನೈಜವಾದುದೆಂದು ಮೋಸಮಾಡಿದ್ದು ಭಾ.ದಂ.ಸಂ.ಕಲಂ 471 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಮಾಡಿದ್ದೀರಾ ಅಂತ ದೋಷಾರೋಪಣೆ ಮಾಡುತ್ತಿದ್ದೇನೆ.

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಚಾಸಾ-1 ರವರ ರೀತಿಯಲ್ಲಿ ನಕಲಿ ಸಹಿ ಮಾಡಿ ಆರೋಪಿ-2 ರವರಿಂದ ಗುರುತಿಸಿ ಸದರಿ ವಾಹನ ಅಪಘಾತ ಮಾಡಿದೆಯಂದು ಚಾಸಾ-1 ರವರ ಬಾಬ್ತು ಕಾರಿನ ನಂಬರ್ ನಂ.ಕೆಎ-11-ಎಂ-2829 ಪಿರ್ಯಾದಿನಲ್ಲಿ ಸೇರಿಸಿ ಚಾಸಾ-1 ರವರಿಗೆ ವಂಚಿಸಿ ಹಾಗೂ ಚಾಸಾ-1 ರವರಿಗೆ ಮೋಸ ಮಾಡಿರುತ್ತೀರಿ ಎಂದು ಭಾ.ದಂ.ಸಂ.ಕಲಂ 420 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಮಾಡಿದ್ದೀರಾ ಅಂತ ದೋಷಾರೋಪಣೆ ಮಾಡುತ್ತಿದ್ದೇನೆ.

1. ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉ: ತಿಳಿಯಿತು

2. ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ: ವಿಚಾರಣೆ ಆಗಬೇಕು

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ದಿ:16-04-2019 ರಂದು ಓದಿ ಹೇಳಿ ಅವರ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡಿದೆ.)

Aditya 16/4

(ಆದಿತ್ಯ.ಆರ್.ಕಲಾಲ್)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮದ್ದೂರು